ಬಸವಣ್ಣನವರ ಉದಯಾಸ್ತಮಾನಗಳೇ ಬೇರೆ: "ಎನಗೆ ನಿಮ್ಮ ನೆನಹಾದಾಗಲೇ ಉದಯ, ನಿಮ್ಮ ಮರಹಾದಾಗಲೇ ಅಸ್ತಮಾನ!" ಭಗವಂತನಿಗೂ ತಮಗೂ ಇರುವ ಅವಿನಾಭಾವ ಸಂಬಂಧವನ್ನು, ಆಧಾರ-ಆಧೇಯ ಸಂಬಂಧವನ್ನು ಹೀಗೆ ಹೇಳಿಕೊಳ್ಳುತ್ತಾರೆ ಬಸವಣ್ಣನವರು:

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ
ಎಮಗೆ ಎಮ್ಮ ಕೂಡಲಸಂಗಮದೇವರ ನೆನೆವುದೇ ಚಿಂತೆ!

ಭಗವಂತನಿಗಾಗಿ ಬಸವಣ್ಣನವರ ಹಂಬಲ ಈ ಉಕ್ತಿಯಲ್ಲಿ ಉತ್ಕಟವಾಗಿ ಆವಿಷ್ಕಾರಗೊಂಡಿದೆ:

ಅಯ್ಯಾ, ಅಯ್ಯಾ ಎಂದು ಕರೆವುತ್ತಲಿದ್ದೇನೆ
ಅಯ್ಯಾ, ಅಯ್ಯಾ ಎಂದು ಒರಲುತ್ತಲಿದ್ದೇನೆ
ಓ ಎನ್ನಲಾಗದೇ, ಅಯ್ಯಾ!

ಒಮ್ಮೊಮ್ಮೆ, ತಮ್ಮ ಭಕ್ತಿಯ ಬಗೆಗೆ ಬಸವಣ್ಣನವರಿಗೆ ಅತೃಪ್ತಿಯಾಗಿ, ಅವರು ಹೀಗೆ ನಿವೇದಿಸುತ್ತಾರೆ: "ಸಾಸಿವೆಯ ಷಡ್ಭಾಗದಿನಿತು ಭಕ್ತಿ ಎನ್ನೊಳಿಲ್ಲಯ್ಯ."

ಭಕ್ತಿ ಸುಲಭವಲ್ಲ. ಅದರ ಕ್ಲಿಷ್ಟತೆಯನ್ನು ಹೀಗೆ ಸ್ಪಷ್ಟಪಡಿಸುತ್ತಾರೆ ಬಸವಣ್ಣನವರು: "ಭಕ್ತಿಯೆಂಬುದ ಮಾಡಬಾರದು; ಗರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು!" ಅಷ್ಟೇ ಅಲ್ಲ ಸರ್ವಸ್ವ ತ್ಯಾಗವನ್ನೂ ಅಪೇಕ್ಷಿಸುತ್ತದೆ, ದಿಟವಾದ ಭಕ್ತಿ; ಅದು ಬಾಯಿ ಮಾತಲ್ಲ. ಕತ್ತಿಯ ಬಾಯ ಧಾರೆ:

ಮಾತಿನ ಮಾತಿನಲ್ಲಪ್ಪುದೇ ಭಕ್ತಿ?
ಮಾಡಿ ತನು ಸವೆಯದನ್ನಕ್ಕ,
ಮನ ಸವೆಯದನ್ನಕ್ಕ,
ಧನ ಸವೆಯದನ್ನಕ್ಕ.

ಎಂ. ಆರ್. ಶ್ರೀನಿವಾಸಮೂರ್ತಿಯವರು ಹೇಳುವಂತೆ, ಬಸವಣ್ಣನವರ ವಚನಗಳು, "ಪ್ರಬಲ ಮನೋಯುದ್ಧದ ಚರಿತ್ರೆಗಳಾಗಿವೆ", "ಆತ್ಮಪರೀಕ್ಷಾ ಪರಂಪರೆಯಾಗಿವೆ." 'ಆತ್ಮನ ಕಾಳರಾತ್ರಿ' ಮತ್ತು ಅದು ಕಳೆದ ಮೇಲೆ ಮೂಡುವ 'ಬೆಳ್ಳಂಬೆಳಗು' – ಎರಡೂ ಅವುಗಳಲ್ಲಿ ಪರಿಣಾಮಕಾರಿಯಾಗಿ ನಿದರ್ಶಿತವಾಗಿವೆ. ಬಸವಣ್ಣನವರಲ್ಲಿ ಇಹ, ಪರಗಳ ಸಮನ್ವಯವನ್ನು ಕಾಣುತ್ತೇವೆ. ಮರ್ತ್ಯ ಹೃದಯದಲ್ಲಿ ಅಮರ್ತ್ಯವನ್ನು ಪ್ರತಿಷ್ಠಾಪಿಸಲು ಶ್ರಮಿಸಿದ ಮಹಾನುಭಾವರು, ಬಸವಣ್ಣನವರು.

"ಸಕಲ ಜೀವಾತ್ಮರ ಲೇಸು" ಎಂಬ ಅವರ ಮಾತಿನಲ್ಲಿ ಸರ್ವೋದಯದ, "ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ" ಎಂಬ ಉಕ್ತಿಯಲ್ಲಿ ಅಂತ್ಯೋದಯದ ಪರಿಕಲ್ಪನೆ ಗೋಚರಿಸುತ್ತದೆ. ಮಾನವೀಯತೆ, ಸಮಾನತೆ, ಸದಾಚಾರಗಳ ತಳಹದಿಯ ಮೇಲೆ ನವಸಮಾಜವನ್ನು ನಿರ್ಮಿಸುವುದೇ ಅವರ ಉತ್ತುಂಗ ಧ್ಯೇಯವಾಗಿತ್ತು.

'ನಿರ್ಗತಿಕ'ವಾಗಿದ್ದ ಸಮಾಜಕ್ಕೆ ಗತಿಶೀಲತೆಯನ್ನು ತಂದುಕೊಡಲು, 'ಸ್ಥಾವರ' ವನ್ನು 'ಜಂಗಮ' ಗೊಳಿಸಲು ತಮ್ಮ ಜೀವನದುದ್ದಕ್ಕೂ ಬಸವಣ್ಣನವರು ಹೋರಾಡಿದರು.

ಅಂದಿನಂತೆ ಇಂದೂ, 'ತಮಂಧ ಘನ'ವಾಗಿರುವ ನಮ್ಮ ಸಮುದಾಯಕ್ಕೆ ಬಸವಣ್ಣನವರೇ, ಅವರ ಅಮೃತ ಸಂದೇಶವೇ ಗತಿ, ತಾರಕ ಮಂತ್ರವಾಗಬೇಕು. ಅವರು 'ನಿರಂಕುಶಮತಿ'! ಕುವೆಂಪು ಹೇಳುವಂತೆ ಅವರು, "ಮಾನವ ಹೃದಯಕ್ಷೇತ್ರದ ದೇವಕೃಷಿಕ." ಅವರು ಭಕ್ತಿಯ ಬೆಳೆಗಾರ ಎಂತೋ ಅಂತೆಯೇ ಅಪ್ರತಿಮ ಕ್ರಾಂತಿಕಾರ ಕೂಡ. ಅವರ ಜೀವನ, ವ್ಯಕ್ತಿತ್ವ ಹಾಗೂ ತತ್ತ್ವಗಳು ಸಂಕೀರ್ಣವೂ, ಪರಿಪೂರ್ಣವೂ ಆಗಿವೆ. ಹಾಗೆಯೇ ಎಲ್ಲ ಕಾಲಕ್ಕೂ, ಎಲ್ಲ ಜನರಿಗೂ ಜೀವನಪೋಷಕಗಳಾಗಿವೆ. •

# “ನೀವವನ ಕಂಡಿಹಿರಾ? ನಿಮಗವನು ಸಿಗುವನೇ?”

ಶಿಕಾರಿಪುರ ಹರಿಹರೇಶ್ವರ

**ಕ**ನ್ನಡದ ಮೊಟ್ಟ ಮೊದಲ ವಿದ್ವತ್ಪೂರ್ಣ ಕವಯಿತ್ರಿ ಎಂಬ ಗೌರವಕ್ಕೆ ಪಾತ್ರಳಾದ ಮಹಾದೇವಿ ಅಕ್ಕ, ತನ್ನ ಒಂದು ಪ್ರಖ್ಯಾತ ವಚನದಲ್ಲಿ ಹೀಗೆ ಹೇಳುತ್ತಾಳೆ:

ಚಿಲಿಮಿಲಿಯಿಂದೋದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೇ;
ಸರವೆತ್ತಿ ಪಾಡುವ ಕೋಗಿಲೆಗಳಿರೇ ನೀವು ಕಾಣಿರೆ, ನೀವು ಕಾಣಿರೇ;
ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ, ನೀವು ಕಾಣಿರೇ;
ಕೊಳನ ತಡಿಯೊಳಗಾಡುವ ಹಂಸಗಳಿರಾ, ನೀವು ಕಾಣಿರೆ, ನೀವು ಕಾಣಿರೇ;
ಗಿರಿಗಹ್ವರದೊಳಗಾಡುವ ನವಿಲುಗಳಿರಾ, ನೀವು ಕಾಣಿರೆ, ನೀವು ಕಾಣಿರೇ;
ಚನ್ನಮಲ್ಲಿಕಾರ್ಜುನ ಎಲ್ಲಿಹನೆಂದು ನೀವು ಹೇಳಿರೇ ॥

ಹೊರನೋಟಕ್ಕೆ, ಮೊದಲ ಓದಿನಲ್ಲಿ, ನಮಗನಿಸುವುದು ಇದು: ಈ ಭಾವುಕ ವಿರಹಿಣಿ ಯೋಗಿನಿ ಕಾಡಿನಲ್ಲಿ ಅಲೆದಾಡುತ್ತ, ಗಿಡಮರಗಳನ್ನೂ, ಪ್ರಾಣಿಪಕ್ಷಿಗಳನ್ನೂ ಮಾತನಾಡಿಸಿ ಕೇಳುತ್ತಿದ್ದಾಳೆ. “ನನ್ನ ಆರಾಧ್ಯದೈವ ಎಲ್ಲಿದ್ದಾನೆ, ನಿಮಗೆ ಗೊತ್ತೆ? ನನ್ನ ಕನಸಿನ ಮನಸಿನ ಇನಿಯ ಚೆನ್ನಮಲ್ಲಿಕಾರ್ಜುನನನ್ನು ನೀವು ನೋಡಿದ್ದೀರಾ? ಅವನೀಗ ಎಲ್ಲಿದ್ದಾನೆ ಎಂಬುದು ನಿಮಗೆ ತಿಳಿದಿದ್ದರೆ ನನಗೆ ಕೂಡಲೇ ಹೇಳಿ” ಎಂಬ ಆಕೆಯ ಆರ್ತತೆಯ ಮೊರೆ ಇಲ್ಲಿದೆ.



ಅಕ್ಕ ಮಹಾದೇವಿಯು ಮಹಾನ್ ಅನುಭಾವಿಯೂ ಹೌದು, ಶ್ರೇಷ್ಠ ಕವಯಿತ್ರಿಯೂ ಹೌದು. ಆಕೆಯ ಅನುಭಾವಕಾವ್ಯದ ಹೃದಯಂಗಮ ವಿವರಣೆಯನ್ನು, ಮೋಹಕಶೈಲಿಯಲ್ಲಿ ಈ ಲೇಖನದಲ್ಲಿ ಕಾಣಬಹುದು. ದಿವಂಗತ ಲೇಖಕರು ಅಮೆರಿಕದಲ್ಲಿ ಬಹುಕಾಲ ನೆಲೆಸಿ, ಅಲ್ಲಿಯೇ ಕನ್ನಡ ಸಾಹಿತ್ಯದ ಸೇವೆಯನ್ನು ಮಾಡಿದ ಮಹನೀಯರು. ಇತ್ತೀಚಿನ ವರ್ಷಗಳಲ್ಲಿ ಮೈಸೂರಿನಲ್ಲಿ ನೆಲೆಸಿ, ಹಲವಾರು ಗ್ರಂಥಗಳನ್ನು ರಚಿಸಿದ್ದವರು. ಅವರು ಸಾಹಿತ್ಯಸಂಘಟಕರೂ ಆಗಿದ್ದರು.

ಹೌದು, ಹರನೇ ಪತಿಯಾಗಬೇಕೆಂದು ಬಹುಕಾಲ ತಪಸ್ಸು ಮಾಡಿದ್ದಳು ಅವಳು. ಮದುವೆಯ ಮಂಟಪದಲ್ಲಿ ಹಸೆಯನ್ನೇರಿ ಸಂಸಾರಬಂಧನದಲ್ಲಿ ಸಿಲುಕಲೆಂದು ಅರಿಯದವರು ಮಾತನಾಡ ತೊಡಗಿದರೆ, ತಿಳಿದವರು ಅವಳನ್ನು ಶಿವನ ಹತ್ತಿರ ಕಳಿಸಿದರು. ಗುರುವೇ ಹಿತೈಷಿಯಾದ; ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಬ, ಹವಳದ ಚಪ್ಪರವಿಕ್ಕಿ ಮಾಣಿಕ್ಯದ ಮೇಲುಕಟ್ಟು ಕಟ್ಟಿ, ಕಂಕಣ ಕೈಧಾರೆ, ಸ್ಥಿರ ಸೇಸೆಯನ್ನು ಇಕ್ಕಿ, ಸಾದೃಶ್ಯನಾದ ವರನ ನೋಡಿ, ಚೆನ್ನಮಲ್ಲಿಕಾರ್ಜುನನೆಂಬ ಲಿಂಗದೇವ ಮದುವಣಿಗನೊಡನೆಯೇ ಅವಳ ಮದುವೆ ಮಾಡಿದರು, ಇಲ್ಲ, ಲಗ್ನವಾಯಿತು.

ಇವಳು ಉತ್ಕಟ ಪ್ರಣಯಿ. ಕನಸು ಮನಸಿನಲ್ಲೂ ಶಿವನಲ್ಲದೇ ಬೇರೊಂದನ್ನು ನೆನೆಯದವಳು. ಅವಳು ಹೀಗೆ ಹೇಳುತ್ತಾಳೆ: “ಗಿರಿಯಲ್ಲಲ್ಲದೆ ಈ ನವಿಲು ಹುಲ್ಲುಮೊರಡಿಯಲ್ಲಿ ಆಡುತ್ತದೆಯೇ? ಕೊಳವನ್ನು ಬಿಟ್ಟು ಕಿರುಹಳ್ಳವನ್ನು ಹುಡುಕಿಕೊಂಡು ಹಂಸ ಹೋಗದು; ಮಾವಿನಮರದ ತಳಿರು ಸವಿಯದೆ ಕೋಗಿಲೆ ಸುಮ್ಮನೆ ಹಾಡದು; ಪರಿಮಳದ ಹೂಗಳಲ್ಲದೆ ಬೇರೆಡೆಗೆ ದುಂಬಿ ಹೋಗದು – ಹಾಗೆ ನನ್ನ ಮನಸ್ಸೂ ಸಹ ಚೆನ್ನಮಲ್ಲಿಕಾರ್ಜುನನನ್ನು ಬಿಟ್ಟು ಬೇರೆ ಕಡೆಗೆ ಹೋಗಲಾರದು” ಎಂದು.

ಅವನು ಕೇಳಿದರೆ ಕೇಳಲಿ, ಇಲ್ಲದಿದ್ದರೆ ಮಾಣು; ಅವಳಂತೂ ಅವನ ಬಗ್ಗೆ ಹಾಡದೆ ಸೈರಿಸಳು. ನೋಡಿದರೆ ನೋಡಲಿ, ಇಲ್ಲದಿದ್ದರೆ ಬಿಡಲಿ; ಅವಳಂತೂ ಅವನನ್ನು ‘ನೋಡಿ’ ಹಿಗ್ಗದೆ ತಣಿಯಳು. ಅವನು ಮೆಚ್ಚಲಿ ಮೆಚ್ಚದಿರಲಿ, ಒಲಿಯಲಿ ಒಲಿಯದಿರಲಿ; ಅವಳು ಮಾತ್ರ ಅವನ ರೂಪವನ್ನು ತನ್ನ ಕಣ್ಣುಗಳಲ್ಲಿ ತುಂಬಿಕೊಂಡು, ತನ್ನವನನ್ನಾಗಿಸಿಕೊಂಡು ಇರದೇ ಬಿಡಳು.

ಇಷ್ಟು ತೀಕ್ಷ್ಣವಾಗಿ ಮನಸಾರೆ ಹುಡುಕಿದರೆ ಮಾತ್ರ ‘ಅವನು’ ಸಿಗುವುದು; ನಾವು ಎಷ್ಟರಪ್ರಮಾಣದಲ್ಲಿ ‘ಶಬರಿ’ಯಾಗಬಲ್ಲೆವೋ,

ಅಷ್ಟಷ್ಟು ಬೇಗ ನಮ್ಮ 'ರಾಮ' ನಮ್ಮ ಬಳಿಸಾರಿ ಬಂದಾನು! ಪ್ರಾಣಿಪಕ್ಷಿಗಳನ್ನೂ ಅಂಗಲಾಚಿ ಕೇಳುವ, ಬೇಡುವ ಈ ವಚನಕ್ಕೆ ಇರುವ ಹೊರನೋಟಕ್ಕೆ ಕಾಣುವ ಅರ್ಥ, ಅಂದರೆ ವಾಚ್ಯಾರ್ಥ ಸೂಕ್ತವಾದದ್ದೇ. ಆದರೆ, ಇನ್ನೊಂದು ಒಳ ಅರ್ಥ, ಶ್ಲೇಷೆ, ಧ್ವನಿ ಈ ವಚನದಲ್ಲಿ ಅಡಗಿದೆ. ಆದನ್ನು ಕವಯಿತ್ರಿ ನವಿರಾಗಿ, ಸೂಚ್ಯವಾಗಿ ನಮ್ಮ ಗಮನಕ್ಕೆ ತರುತ್ತಿದ್ದಾಳೆ. ಅದೇನದು?

* * * * *

ಹದಿನಾಲ್ಕು–ಹದಿನೈದನೇ ಶತಮಾನವನ್ನು ಭಾರತದ 'ಸಂತಯುಗ' ಎಂದು ಕರೆಯಬಹುದು: ಉತ್ತರದಲ್ಲಿ ರಾಮಾನಂದ, ತುಲಸೀದಾಸ, ನಾನಕ್, ಕಬೀರ, ಮೀರಾಬಾಯಿ ಮುಂತಾದವರು; ದಕ್ಷಿಣದಲ್ಲಿ ವಲ್ಲಭಾಚಾರ್ಯ, ಪೂರ್ವದಲ್ಲಿ ಬಂಗಾಳದ ಚೈತನ್ಯ, ಚಂಡೀದಾಸ, ವಿದ್ಯಾಪತಿ, ಕಾಶ್ಮೀರದಲ್ಲಿ ಲಲ್ಲೇಶ್ವರಿ – ಹೀಗೆ ಈ ಕಾಲಮಾನದಲ್ಲಿ ಸಂತರೋ ಸಂತರು. ಕಾಶ್ಮೀರದ ಲಲ್ಲಾ, ತಮಿಳುನಾಡಿನ ಆಂಡಾಳ್, ಮಹಾರಾಷ್ಟ್ರದ ಮುಕ್ತಾಬಾಯಿ, ಜನಾಬಾಯಿ ಮತ್ತು ರಾಜಸ್ಥಾನದ ಮೀರಾಬಾಯಿಯರಂತೆ ಕರ್ನಾಟಕದ ಅಕ್ಕಮಹಾದೇವಿ ಕೂಡ ಭಕ್ತಿಪಂಥದ ಶ್ರೇಷ್ಠ ಚಿಂತಕರ ಸಾಲಿನಲ್ಲಿ ಮೆರೆದ ಧೀರ ಮಹಿಳೆ. ಪತಿ ರಾಣಾನನ್ನು ತೊರೆದು, ರಾಜವಂಶದವಳಾದರೂ ಕಾಲಿಗೆ ಗೆಜ್ಜೆ ಕಟ್ಟಿ, ಭಜನ್‌ಗಳನ್ನು ಹಾಡಿ ಕುಣಿದಾಡಿ, ತನ್ನ ಗಿರಿಧರ ಗೋಪಾಲನನ್ನು ಅರಸುತ್ತ, ಕೊನೆಗೆ ರಾಜಸ್ಥಾನದ ಮರಳುಗಾಡಿನಲ್ಲಿ ಮರೆಯಾಗುತ್ತಾಳೆ, ಮೀರಾ. ಯುವಕ ಕೃಷ್ಣನ ನೆನಪಿನಲ್ಲೇ ಆಂಡಾಳ್ ತಮಿಳು ಪಾಶುರಗಳನ್ನು ಹಾಡುತ್ತಾ, ಕೃಷ್ಣನಲ್ಲೇ ಲೀನಳಾಗಿಬಿಡುತ್ತಾಳೆ. ಕಾರಿಕಲ್ ಅಮ್ಮೆಯಾರ್ ಸಮುದ್ರದ ಬಂದರಿನ ಒಬ್ಬ ಶ್ರೀಮಂತ ವರ್ತಕನ ಮಗಳು. ಈ 'ಪುಣಿದವತಿ'ಗೆ (ನಿಷ್ಕಳಂಕ ಪುಣ್ಯವತಿ) ಚಿಕ್ಕಂದಿನಿಂದಲೂ ಶಿವ ನಟರಾಜನೇ ಆರಾಧ್ಯ ದೈವ. ತನ್ನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ಗಂಡ ಪರಮದತ್ತನಿಂದ ಪರಿತ್ಯಕ್ತಳಾಗಿ, ಶಿವನನ್ನು ಬೇಡಿಕೊಂಡು, ಕೊನೆಗೆ, ಹಣ್ಣು ಹಣ್ಣು ಮುದುಕಿಯಾಗಿ, ಶಿವನ ಗಣಗಳಲ್ಲಿ ಒಬ್ಬಳಾಗುವಳು; ತಿರುವಾಲಂಗಾಡಿನ ನಟರಾಜನ ನೃತ್ಯ ಕುರಿತು ಆಕೆ ಹಾಡಿದ ಭಕ್ತಿಮಾಲೆಗಳು ಹಾಗೂ 'ಅರ್ಪುದ ತಿರುವಂತಾದಿ' ಮುಂತಾದ ಕಾವ್ಯಮಯ ಸ್ತುತಿಗಳಿಂದ ಈಕೆ ಹೆಸರಾದವಳು.

ಅವ್ವೆಯಾರ್ ತನ್ನ ರೂಪವೇ ತನ್ನ ಸಾಧನೆಗೆ ಅಡ್ಡಿ ಬರುತ್ತದೆಂದು ಕಂಡು, ತನ್ನ ಆರಾಧ್ಯದೈವ ವಿಘ್ನೇಶ್ವರನಿಗೆ ಮೊರೆಯಿಟ್ಟು, ತನ್ನನ್ನು ಒಬ್ಬ ಸಾಮಾನ್ಯ ಮುದುಕಿಯಾಗುವಂತೆ ಕೇಳಿಕೊಳ್ಳುತ್ತಾಳೆ. ಊರೂರು ಅಲೆಯುತ್ತ, ಜನರಿಗೆ, ರಾಜರಿಗೆ ಬುದ್ಧಿವಾದ ಹೇಳುತ್ತಾ ಅವರನ್ನು ಸನ್ಮಾರ್ಗಕ್ಕೆಳೆಯುತ್ತಾಳೆ. ಈ ಕವಯಿತ್ರಿ ತನ್ನ ತಮಿಳು 'ಆತ್ತಿ ಚೂಡಿ' (ಸವಿನುಡಿ)ಗಳಿಂದ, 'ನೀತಿ ವೆಣ್ಬಾ ಚೌಪದಿ'ಗಳಿಂದ ಪ್ರಖ್ಯಾತಳು.

ವಿಷ್ಣುಚಿತ್ತನಿಗೆ ತುಳಸೀವನದಲ್ಲಿ ಸಿಕ್ಕಿದ ಮಗು ಗೋದಾ ಬೆಳೆಬೆಳೆಯುತ್ತಲೇ ವೃಂದಾವನದ ಕೃಷ್ಣನನ್ನು ಮನಸ್ಸಿನಲ್ಲಿ ತುಂಬಿಕೊಂಡವಳು. ತನ್ನ ಸೌಂದರ್ಯ ಮತ್ತು ಪ್ರೇಮಗಳು ಕೃಷ್ಣನಿಗೇ ಮೀಸಲಾಗಿವೆ ಎಂಬುದನ್ನು ತೋರಲು, ದೇವರಿಗೆ ತೊಡಿಸುವ ಪುಷ್ಪಹಾರವನ್ನು ತಾನು ಮೊದಲು ಧರಿಸಿ, ತನಗೆ ಒಪ್ಪಿಗೆಯಾದ ಮೇಲೆಯೇ ಅದನ್ನು ದೇವರಿಗೆ ಸಮರ್ಪಿಸುತ್ತಿದ್ದಳೆಂಬ ಕತೆ ಹೇಳುತ್ತಾರೆ. ಬೆಳೆದ ಹುಡುಗಿಯಾದ ತನಗೆ, ಅನುರೂಪನಾದವನನ್ನು ಮದುವೆಯಾಗೆಂದು ತಂದೆ ಒತ್ತಾಯಿಸಿದಾಗ, ಶ್ರೀರಂಗದ ರಂಗನಾಥನನ್ನೇ ಹಂಬಲಿಸುತ್ತಾ, ಅವನಲ್ಲೇ ಐಕ್ಯಳಾದವಳು ಇವಳು. ಪ್ರೇಮಸಾಗರದಲ್ಲಿ ಮುಳುಗಿದ್ದ ಈ ಆಂಡಾಳ್ ತನ್ನ 'ತಿರುಪ್ಪಾವೈ', 'ತಿರುಮೊಳಿ'ಗಳಿಂದ ಇಂದಿಗೂ ಚಿರಂಜೀವಿನಿ.

ಸಾಮಾನ್ಯವಾಗಿ ಸಂತರೆಲ್ಲರೂ ಕವಿಗಳು ಎಂಬ ಮಾತಿದ್ದರೂ, ಕಾವ್ಯಾಂಶವು ಅವರ ಕೃತಿಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಬೆಳಗುತ್ತಿರುತ್ತದೆ. ಅಷ್ಟಾಗಿ ಓದಿರದಿದ್ದರೂ, ಲಲ್ಲಳದು ಅನುಭವಜನ್ಯವಾದ ವಾಖ್‌ಗಳು. ರಾಜವಂಶದ ಮೀರಾಳದ್ದು ಭಕ್ತಿಸಾಹಿತ್ಯದ ಉತ್ತಮ ರಚನೆಗಳು. ಆಂಡಾಳ್‌ಳ ಕೃತಿಗಳು ಆಕೆಯ ಸ್ವೋಪಜ್ಞತೆಯ ಆಳವನ್ನೂ, ವ್ಯಾಸಂಗದ ಹರವನ್ನೂ ಎತ್ತಿ ತೋರಿಸುತ್ತವೆ.

ಇವರ ಮಧ್ಯೆ ಅಕ್ಕಮಹಾದೇವಿ ವಿಭಿನ್ನಳಾಗಿ ತೋರುತ್ತಾಳೆ. ಉಡುತಡಿಯ ಮಹಾದೇವಿ ಅಕ್ಕ ಕೌಶಿಕರಾಜನ ಅಂತಃಪುರವನ್ನು ಧಿಕ್ಕರಿಸಿ, ಹೊಸಿಲು ದಾಟಿ, ಬಟ್ಟೆಬರೆಗಳನ್ನು ಬಿಸುಟು, ಚೆನ್ನಮಲ್ಲಿಕಾರ್ಜುನನೇ ತನ್ನ ಇನಿಯನೆಂದು ಸಾರುತ್ತಾ, ವಚನಗಳನ್ನು ಪಾಡುತ್ತಾ, ಅನುಭವಮಂಟಪದಲ್ಲಿ ಪುಟವಿಟ್ಟ ಚಿನ್ನವಾಗಿ ಎದ್ದುಬಂದು, ಕೊನೆಗೆ ಕದಳೀವನದಲ್ಲಿ ಬಯಲಾಗುತ್ತಾಳೆ. ಅವಳು ಚಿಕ್ಕಂದಿನಲ್ಲೇ ಚೆನ್ನಾಗಿ ವಿದ್ಯಾಭ್ಯಾಸ ಮಾಡಿದವಳು, ವೇದೋಪನಿಷತ್ತುಗಳನ್ನು ಸಾಕಷ್ಟು ಓದಿಕೊಂಡವಳು, ವ್ಯಾಸಂಗ ಮಾಡಿದವಳು ಎಂಬುದು ಅವಳ ವಚನಗಳಿಂದಲೇ ವ್ಯಕ್ತವಾಗುತ್ತದೆ. ತನ್ನ ಹಲವು ವಚನಗಳಲ್ಲಿ ಅಕ್ಕ, ಆಗಮಗಳಿಂದ ಸಂಸ್ಕೃತ ಮಂತ್ರ, ಶ್ಲೋಕಗಳನ್ನು ಉದ್ಧರಿಸುತ್ತಾಳೆ. ಬಾಣ, ಮಯೂರ, ಕಾಳಿದಾಸ, ಓಹಿಲ, ಉದ್ಭಟ ಮುಂತಾದವರನ್ನೆಲ್ಲಾ ಚೆನ್ನಾಗಿ ಓದಿಕೊಂಡವಳು ಆಕೆ. ಹಾಗೆಂದು ಆಕೆ ತಾನೇ ಹೇಳಿಕೊಂಡಿದ್ದಾಳೆ. ಕನ್ನಡದಲ್ಲಂತೂ ಈ ಮಹಾದೇವಿಯಕ್ಕನೇ ಪ್ರಥಮ ಕವಯಿತ್ರಿ ಎಂಬ ಹೆಗ್ಗಳಿಕೆಯೂ ಹುಸಿಮಾತಲ್ಲ. ಮರಮರ ಮಥಿನಿಸಿ ಹುಟ್ಟಿದ ಕಿಚ್ಚಿನಂತೆ, ಅವಳ ಅನುಭಾವ. ಈ ಅನುಭಾವಿಯ ತತ್ತ್ವಪದರೂಪದ ಅರ್ಥಗರ್ಭಿತ ವಚನಗಳನ್ನು ಅವು ಸ್ಫುರಿಸುವ ವಿಶೇಷಾರ್ಥದ ಬೆಳಕಿನಲ್ಲಿಯೇ ನಾವು ದರ್ಶಿಸಬೇಕು.

* * * * *

ಈಗ ಮತ್ತೊಮ್ಮೆ ಅಕ್ಕನ ಆ ವಚನವನ್ನು ನೋಡೋಣ: ಅಕ್ಕ ಹೇಳುತ್ತಾಳೆ: "ಅರ್ಥ ತಿಳಿಯದೆ, ಭಾವ ಅರಿಯದೆ, ಬರಿ ಮಂತ್ರಗಳನ್ನೇ ಹೇಳಿಕೊಂಡು, ಅದನ್ನೇ 'ಪೂಜೆ' ಎಂದು ನಂಬಿಕೊಂಡವರಿದ್ದಾರೆ; ನೀವು ಆ ಬಗೆಯವರೇನು?

ಬರೀ ಕಂಠಪಾಠ ಮಾಡಿಕೊಂಡು, ಗಿಳಿಗಳಂತೆ ಮಂತ್ರೋಚ್ಚಾರಣೆಗೇ ಒತ್ತು ಕೊಡುವ, ಆದ್ಯತೆ ಕೊಡುವ ನೀವು ದೇವರು ಕಾಣುವನೆಂಬ ಭ್ರಮೆಯಲ್ಲಿದ್ದೀರಾ? ಇಲ್ಲ, ನಿಮಗವನು ಕಾಣಲಾರ!

"ಕೋಗಿಲೆಯಂತೆ ಸುಶ್ರಾವ್ಯವಾಗಿ ಹಾಡುತ್ತ ನೀವು ಪ್ರಾರ್ಥನೆ, ಭಜನೆ ಮಾಡುತ್ತಿರಬಹುದು; ಆದರೆ, ನಿಮ್ಮ ಮನೋಧರ್ಮವೆಂತಹುದು? ನವಿಲಿನಂತೆ ಚೇತೋಹಾರಿಯಾಗಿ ದೇವರೆದುರು ನೃತ್ಯಮಾಡುತ್ತಿರಬಹುದು. ಅವೆಲ್ಲವೂ ಭಗವಂತನಿಗೆ ಸಮರ್ಪಿಸುವ ಕಲಾರಾಧನೆ ಎಂಬ ಭಾವನೆಯೂ ನಿಮ್ಮಲ್ಲಿದ್ದಿರಬಹುದು. ಆದರೆ, ನಿಮ್ಮ ಗಮನವೆಲ್ಲ ಸಂಗೀತಶಾಸ್ತ್ರದ ಅಥವಾ ನೃತ್ಯಶಾಸ್ತ್ರನಿಯಮಗಳ ಪರಿಪಾಲನೆಗೇ ಮೀಸಲಾದುದಾದರೆ, ನಿಮಗೂ ಭಕ್ತಿಗೂ ದೂರ, ದೂರ ತಾನೆ? ಸಾಹಿತ್ಯವೇನೂ ಬೇಕಿಲ್ಲದೆ, ರಾಗವೈಖರಿಯ ವಿನ್ಯಾಸದ ವೈಭವೀಕರಣಕ್ಕಾಗಿಯೇ ಗಂಟೆಗಟ್ಟಲೆ ಹಾಡಬಲ್ಲವರು ನೀವೇನು? ಇಡುವ ಹೆಜ್ಜೆ ಎಲ್ಲಿ ತಪ್ಪೀತೆಂಬ ನಡುಕದ ನಡುವೆಯೂ ನಿಮ್ಮ ಎದೆಯ ಮಿಡಿತ ಮೃಡನ ಜೊತೆಗೂಡೀತೆ? ನಿಮಗವನು ದೊರಕಲಾರ.

"ಮಕರಂದಭರಿತ ಪುಷ್ಪಗಳನ್ನರಸಿ ಎತ್ತೆತ್ತಲೋ ಹಾರಾಡುವ ದುಂಬಿಗಳಂತೆ, ಆ ದೇವರು, ಈ ದೇವರು ಎಂದುಕೊಂಡು ಕಂಡಕಂಡೆಡೆಯೆಲ್ಲ ಅಲೆಯುತ್ತ ಕೈಮುಗಿಯುತ್ತ, ಏಕಾಗ್ರಚಿತ್ತತೆಯನ್ನು ಕಳೆದುಕೊಂಡರೆ ನಿಮಗೆ ಅವನು ಸಿಗುವನೇನು? ಖಂಡಿತಾ ಸಿಗಲಾರ.

"ತೀರ್ಥಯಾತ್ರೆ, ಸರೋವರ ನದೀಸ್ನಾನ, ಅಲ್ಲಿನ ಸಾಂಪ್ರದಾಯಿಕ ಆರಾಧನೆಗಳೇ ಮುಖ್ಯವೆಂದುಕೊಂಡು, ಹೊರಗಿನ ಕೊಳೆ ಕಳೆದುಕೊಳ್ಳುವ ಪ್ರಯತ್ನದಲ್ಲೇ ಬಾಳನ್ನು ಸವೆಸುವುದಕ್ಕೆ ತೊಡಗಿದ್ದರೆ, ಎಷ್ಟು ಬಾರಿ ಮುಳುಗೆದ್ದರೂ, ಈಸಿದರೂ ನಿಮ್ಮ ಕೈಗೆ ಅವನು ಎಟುಕಲಾರ."

"ಈಗ ಹೇಳಿ, ಎಲ್ಲೇ ಇರಲಿ, ಅವನು ನಿಮಗೆ ಸಿಕ್ಕಾನೇನು?" ಇದೇ ಅಕ್ಕ ನಮಗೆಲ್ಲ ಕೇಳುವ ಪ್ರಶ್ನೆ!

* * * * *

ಮಹಾದೇವಿಯಕ್ಕನ ವಚನಗಳಲ್ಲಿ ಹುದುಗಿರುವ ಶಿವಾನುಭವದ ನಿರೂಪಣೆ ನಿಗೂಢವಾದುದು. ಅದು ವಿಶೇಷ ಭಕ್ತಿಯೋ, ಅಪೂರ್ವ ವಿರಹಿಣಿಯ ಆರ್ತ ಮೊರೆಯೋ, ವಿರಾಗಿಣಿ ಯೋಗಿನಿಯ ದರ್ಶನವೋ– ಏನೇ ಇದ್ದರೂ, ಅದರ ಅಭಿವ್ಯಕ್ತಿಯಲ್ಲಿ ಸರಳ ಸುಂದರ ಕಾವ್ಯಾಂಶ ವಿಜೃಂಭಿಸುತ್ತದೆ ಎಂಬುದು ಮಾತ್ರ ಸತ್ಯ. ಅದಕ್ಕೆ ಕಾರಣವೂ ಸುಸ್ಪಷ್ಟ. ಅಕ್ಕ ಮಹಾದೇವಿ ಮೂಲತಃ ಒಬ್ಬ ಕವಯಿತ್ರಿ, ಅನುಭಾವಿ ಕವಯಿತ್ರಿ.

ಇಂಥ ಕಾವ್ಯಹೃದಯಿಗಳು ಏನನ್ನೇ ಹೇಳಲಿ, ಯಾವ ಸಮಯದಲ್ಲೇ ಮಾತನಾಡಲಿ, ಡಾ. ಸಾ. ಶಿ. ಮರುಳಯ್ಯನವರು ವಿಮರ್ಶಿಸಿರುವಂತೆ, "ತನ್ನ ಪರಿಸರದೊಡನೆ ಸ್ಪಂದಿಸುವ ಚೈತನ್ಯ ಅವರಲ್ಲಿದೆ. ತಮ್ಮ ಅನುಭವದ ಕಕ್ಷೆಯಲ್ಲಿ ಅಳವಟ್ಟಿದ್ದನ್ನು ಕಲೆಯ ಮೂಲಕ ಅಭಿವ್ಯಕ್ತಿಸುವ ಸಾಮರ್ಥ್ಯವಿದೆ. ಮರಳಿನಲ್ಲಿ ಎಣ್ಣೆ ತೆಗೆವ, ಕಲ್ಲಿನಲ್ಲಿ ನಾರೆತ್ತುವ, ಶೂನ್ಯದಲ್ಲಿ ಸೃಷ್ಟಿ ಮಾಡುವ ಗಾರುಡಿಗತನವಿದೆ. ಕವಿಚೇತನವು ಸೌಂದರ್ಯಾನುಭೂತಿಯ ಕಾವ್ಯಾಭಿವ್ಯಕ್ತಿ ಪಡೆದಾಗ ಸಹೃದಯ ಚೇತನ ಅದನ್ನು ಆಸ್ವಾದಿಸಿ ಆನಂದಿಸುತ್ತದೆ... ಔಚಿತ್ಯವನರಿತು ಪ್ರಯೋಗಿಸುವ ಅಸ್ತ್ರವಿದ್ದಂತೆ ಮಾತು. ಅಂಥ ಅರ್ಥಪೂರ್ಣ, ಔಚಿತ್ಯಪೂರ್ಣ ಮಾತಿನ ಬಳಕೆಯಲ್ಲಿ ಅಕ್ಕನದು ಗಣನೀಯ ಯಶಸ್ಸು" (*ಮಹಾದೇವಿಯಕ್ಕಗಳ ವಚನಗಳು*, ಪುಟ ೩೭, ೫೧; ರಾಗಿಣಿ ಪ್ರತಿಷ್ಠಾನ ಪ್ರಕಾಶನ, ಬೆಂಗಳೂರು, ೨೦೦೩).

* * * * *

"ಲೋಕದ ಡೊಂಕ ನೀವೇಕೆ ತಿದ್ದುವಿರಿ?, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" ಎಂದು ಹೇಳುವಲ್ಲಿ, "ನೀವು ಈ ಅಸಾಧ್ಯ ಕೆಲಸದ ವ್ಯರ್ಥಪ್ರಯತ್ನಕ್ಕೆ ಹೆಚ್ಚು ತೊಡಗುವುದು ಬೇಡ" ಎಂದು ಹಿತವಚನ ಹೇಳಿರುವುದು ನಿಜ. ಹಾವಿನ ಡೊಂಕು ಹುತ್ತಕ್ಕೆ ಸಸಿನ, ನದಿಯ ಡೊಂಕು ಸಮುದ್ರಕ್ಕೆ ಸಸಿನ, ನಿಜ" (ಸಸಿನ ಎಂದರೆ 'ನೇರವಾದುದು', 'ದೃಢವಾಗಿರುವುದು' ಎಂದರ್ಥ). ಆದರೆ, ನಂಬಿದ ಶರಣರ ನಡೆನುಡಿಗಳಲ್ಲಿ ಗುರಿಯಷ್ಟೇ ಮಾರ್ಗವೂ ಮುಖ್ಯ. ಕೆಲವೊಮ್ಮೆ ನೇರವಾಗಿ, ಕೆಲವೊಮ್ಮೆ ನಿಧಾನವಾಗಿ ಹೊಳೆಯುವಂತೆ ಹೇಳುವ, ಅವರವರ ಬುದ್ಧಿಮಟ್ಟ, ಚಿಂತನಸಾಮರ್ಥ್ಯ ಮತ್ತು ಮನೋಧರ್ಮಗಳಿಗೆ ಅನುಗುಣವಾಗಿ ಅರ್ಥಮಾಡಿಕೊಳ್ಳಲು ಅನುವಾಗುವಂತೆ ಸಂತರು ಆಡುವುದುಂಟು, ತಿಳುವಳಿಕೆ ಹೇಳುವುದುಂಟು. ಗೊತ್ತಿದ್ದೋ ಗೊತ್ತಿಲ್ಲದೆಯೋ ತಪ್ಪಡಿ ಇಡುವ ಮುಗ್ಧ ಅಮಾಯಕರನ್ನು ಸರಿದಾರಿಗೆ ಎಳೆಯುವ ಈ ಕೆಲಸವನ್ನೇ, ಭಕ್ತಿಯನ್ನೇ ಊರುಗೋಲಾಗಿಸಿಕೊಂಡ ದಾಸಶ್ರೇಷ್ಠರ ಪದಗಳೂ ಮಾಡಿದ್ದು. ಶಿವಶರಣರ ವಚನಗಳು ಎಷ್ಟೆಷ್ಟು ಭಕ್ತಿಪ್ರಧಾನ ಸೂಳ್ನುಡಿಗಳೋ, ಅಷ್ಟಷ್ಟೇ ನೀತಿಪ್ರಧಾನ ಮತ್ತು ವಿಚಾರಪ್ರಧಾನ ವಾಗ್ಝರಿಗಳೆಂಬುದೂ ನಿರ್ವಿವಾದ (ಇದನ್ನೂ ನೋಡಿ: ಡಾ. ಶಂಕರ ಮೊಕಾಶಿ ಪುಣೇಕರ, *ಬಸವಣ್ಣನವರ ವಚನಗಳ ಶಿಲ್ಪವಿಧಾನ*, ಬಸವೇಶ್ವರ ಪುಸ್ತಕ, ಪುಟ ೧೨೮; ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, ೧೯೮೮).

* * * * *

ಅಕ್ಕ ತನ್ನ ಕೊನೆಯ ದಿನಗಳಲ್ಲಿ ಶಿವನನ್ನು ಅರಸುತ್ತ ಶ್ರೀಶೈಲದ ಘೋರಾರಣ್ಯ ಕದಳೀವನಕ್ಕೆ ಹೊಕ್ಕು ಅಲ್ಲಿ ಈ ಮಾತುಗಳನ್ನಾಡುತ್ತಿದ್ದಾಳೆ ಎಂಬ ಪ್ರತೀತಿಯಿದೆ. "ಇಂತು ಮಹಾದೇವಿಯಕ್ಕಗಳು ಶ್ರೀಗಿರಿಯತ್ತ ಬರುತ್ತ, ವನಾಂತರದೊಳು